# SSLC Social Science question bank 2

**೧. ಕಾನ್‌ಸ್ಟಾಂಟಿನೋಪಲ್‌ನ್ನು ಯುರೋಪಿನ ವ್ಯಾಪಾರದ ಹೆಬ್ಬಾಗಿಲೆಂದು ಕರೆಯಲಾಗುತ್ತಿತ್ತು. ಏಕೆ?**

ಉತ್ತರ: ಪೂರ್ವ ರಾಷ್ಟ್ರಗಳೊಂದಿಗಿನ ವ್ಯಾಪಾರಕ್ಕೆ ಭೂಮಾರ್ಗವಾಗಿತ್ತು.

**೨. ಪ್ಲಾಸಿ ಕದನಕ್ಕೆ ಕಪ್ಪು ಕೋಣೆ ದುರಂತವು ಹೇಗೆ ಕಾರಣವಾಯಿತು?**

- ಸಿರಾಜ್‌ನಿಂದ ಪೋರ್ಟ್‌ವಿಲಿಯಂ ಕೋಟೆ ವಶ.
- ಚಿಕ್ಕ ಕೋಣೆಯಲ್ಲಿ 146 ಬ್ರಿಟೀಷರ ಬಂಧನ.
- ಬಂಧನದಲ್ಲಿದ್ದ 123 ಬ್ರಿಟೀಷರ ಸಾವು.
- ರಾಬರ್ಟ್‌ಕ್ಲೈವ್ ಉಗ್ರವಾಗಿ ಕೋಪಗೊಂಡನು.

**೩. ರಾಬರ್ಟ್‌ಕ್ಲೈವ್‌ನನ್ನು ಬ್ರಿಟೀಷ ಸಾಮ್ರಾಜ್ಯದ ನೈಜ ಸ್ಥಾಪಕ ಎಂದು ಕರೆಯುವರು. ಏಕೆ?**

- ಆರ್ಕಾಟಿನ ಮುತ್ತಿಗೆ.
- ಪ್ಲಾಸಿ ಕದನದಲ್ಲಿ ಜಯ.
- ದ್ವಿಮುಖ ಸರ್ಕಾರ ಪದ್ದತಿ ಜಾರಿ.
- ಕಂಪನಿಗೆ ಅಧಿಕ ಲಾಭ ಗಳಿಕೆ.
- ಬಂಗಾಳದ ಗವರ್ನರ್‌ನಾಗಿ ಆಳ್ವಿಕೆ.

**೪. ಸಹಾಯಕ ಸೈನ್ಯ ಪದ್ದತಿ ಎಂದರೇನು?**

ಉತ್ತರ: ಬ್ರಿಟೀಷ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದ.

**೫. ಬ್ರಿಟೀಷರು ಭಾರತದಲ್ಲಿ ಸಾಮ್ರಾಜ್ಯ ವಿಸ್ತರಣೆಗಾಗಿ ಅನುಸರಿಸಿದ ಮಾರ್ಗಗಳಾವುವು?**

- ಬ್ರಿಟೀಷರ ಯುದ್ಧ ನೀತಿ.
- ಸಹಾಯಕ ಸೈನ್ಯ ಪದ್ಧತಿ
- ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ.

**೬. ಖಾಯಂ ಜಮೀನ್ದಾರಿ ಪದ್ಧತಿಯನ್ನು ವಿವರಿಸಿ.**

- ಕಾರ್ನ್‌ವಾಲೀಸನಿಂದ ಬಂಗಾಳ, ಬಿಹಾರಗಳಲ್ಲಿ ಜಾರಿ.
- ಜಮೀನ್ದಾರ ಭೂಮಾಲೀಕನಾದನು.
- ರೈತರಿಂದ ಅಧಿಕ ತೆರಿಗೆ ವಸೂಲಿ.
- ಕ್ರಮೇಣ ಒರಿಸ್ಸಾ, ವಾರಣಾಸಿ, ಆಂಧ್ರಗಳಲ್ಲಿ ವಿಸ್ತರಣೆ.
- ಭೂಮಾಲೀಕರಿಗೆ ಅಧಿಕ ಲಾಭ
- ಜಮೀನ್ದಾರರ ವರ್ಗ ಸೃಷ್ಟಿ.

**೭. ಹಲಗಲಿ ಬೇಡರು ಬ್ರಿಟೀಷರ ವಿರುದ್ಧ ಏಕೆ ಸಿಡಿದೆದ್ದರು?**

ಉತ್ತರ: ಬೇಡರು ತಮ್ಮ ಪರಂಪರಾನುಗತವಾದ ಹಕ್ಕನ್ನು ಉಳಿಸಿಕೊಳ್ಳಲು ಸಿಡಿದೆದ್ದರು.

**೮. ಎರಡನೇ ಆಂಗ್ಲೋ ಮೈಸೂರು ಯುದ್ದ'ದ ಕಾರಣ ಮತ್ತು ಪರಿಣಾಮ ಪಟ್ಟಿ ಮಾಡಿರಿ.**

**ಕಾರಣಗಳು:**

- ತಂಜಾವೂರಿನ ರಾಜಕೀಯ ಸನ್ನಿವೇಶ.
- ಬ್ರಿಟೀಷರಿ'ಂದ ಮದ್ರಾಸ್ ಒಪ್ಪಂದದ ಉಲ್ಲಂಘನೆ.
- ಬ್ರಿಟೀಷರಿಂದ ಮಾಹೆ ವಶ.

**ಪರಿಣಾಮಗಳು:**

- ಹೈದರಾಲಿ ಮೇಲೆ ಮರಾಠರಿಂದ ದಾಳಿ.
- ಪೋರ್ಟೋನೋವೆ ಯುದ್ಧದಲ್ಲಿ ಹೈದರಾಲಿಗೆ ಸೋಲು.
- ಟಿಪ್ಪುನಿಂದ ಮಂಗಳೂರಿನಲ್ಲಿ ಬ್ರಿಟೀಷರಿಗೆ ಸೋಲು.
- ಮಂಗಳೂರು ಒಪ್ಪಂದದೊಂದಿಗೆ ಯುದ್ಧ ಮುಕ್ತಾಯ

**೯. ರಾಮಕೃಷ್ಣ ಮಿಷನ್ ನ ಮುಖ್ಯ ಉದ್ದೇಶವೇನಾಗಿತ್ತು?**

ಉತ್ತರ: ಸರ್ವಧರ್ಮ ಸಮನ್ವಯ ತತ್ವವನ್ನು ಪ್ರಚಾರ ಮಡುವುದು ಮತ್ತು ಅನುಷ್ಠಾನಗೊಳಿಸುವುದು.

**೧೦. ಭಾರತದ ಇತಿಹಾಸದಲ್ಲಿ ೧೯ ನೆಯ ಶತಮಾನವನ್ನು ಭಾರತೀಯ ಪುನರುಜ್ಜೀವನದ ಕಾಲವೆಂದು ಕರೆಯುವರು. ಏಕೆ?**

- ಭಾರತೀಯರಿಗೆ ಪಾಶ್ಚಾತ್ಯ ನಾಗರೀಕತೆಯ ಸಂಪರ್ಕ.
- ಇಂಗ್ಲೀಷ್ ವಿದ್ಯಾಭ್ಯಾಸದ ಸೌಲಭ್ಯ.
- ವೈಚಾರಿಕ ಮನೋಭಾವ ಬೆಳವಣಿಗೆ.
- ಮೂಢನಂಬಿಕೆ ಪ್ರಶ್ನಿಸುವ ಭಾವನೆ.
- ವಿರೋಧಾಭಾಸ ಹಾಗೂ ಸ್ವಹಿತಾಸಕ್ತಿ ಅರಿವು.
- ಪ್ರಜಾಪ್ರಭುತ್ವ, ಸ್ವಾತಂತ್ರದ ಪರಿಕಲ್ಪನೆ.
- ಶೈಕ್ಷಣಿಕ ಜಾಗೃತಿ ಉಂಟಾಯಿತು.

**೧೧. 1857 ರ ದಂಗೆಗೆ ರಾಜಕೀಯ ಕಾರಣಗಳನ್ನು ಪಟ್ಟಿ ಮಾಡಿ.**

- ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ.
- ಸತರಾ, ಝಾನ್ಸಿ, ಜೈಪುರ್ ಬ್ರಿಟಿಷರ ವಶ.
- ತಂಜಾವೂರು & ಕರ್ನಾಟಕದ ನವಾಬರ ರಾಜಪದವಿ ರದ್ದು.
- ಮೊಘಲ್ ಸುಲ್ತಾನ, ಔದ್ ನವಾಬನ ಪದಚ್ಯುತಿ.
- ಸೈನಿಕರ ನಿರುದ್ಯೋಗ.
- ಅಧಿಕಾರವಂಚಿತ ರಾಜರ ಅಸಮಾಧಾನ.

**೧೨. ಸಂಪತ್ತಿನ ಸೋರುವಿಕೆ ಸಿದ್ಧಾಂತ ಎಂದರೇನು?**

ಉತ್ತರ: ಭಾರತದ ಸಂಪತ್ತು ಇಂಗ್ಲೆಂಡಿಗೆ ಹೇಗೆ ಸೋರಿ ಹೋಗುತ್ತದೆ ಎಂಬುದನ್ನು ಅಂಕಿ ಅಂಶಗಳೊಂದಿಗೆ ವಿವರಿಸುವ ಸಿದ್ಧಾಂತ.

**೧೩. ಬಂಗಾಳದ ವಿಭಜನೆ ಹಿಂಪಡೆಯಲು ಕಾರಣಗಳೇನು?**

- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನಿಂದ ವಿರೋಧ.
- ಬಂಗಾಳದ ವಿಭಜನೆ ವಿರುದ್ಧ ದೇಶದಾದ್ಯಂತ ಪ್ರತಿರೋಧ.
- ಸ್ವದೇಶಿ ಚಳುವಳಿ ಆರಂಭ.
- ವಿದೇಶಿ ವಸ್ತುಗಳ ಬಹಿಸ್ಕಾರ.
- ಭಾರತೀಯರಿಂದ ತೀವ್ರ ಪ್ರತಿಭಟನೆ.
- ಬ್ರಿಟಿಷರಿಂದ ಬಂಗಾಳ ವಿಭಜನೆ (1911) ಹಿಂಪಡೆತ.

**೧೪. ವಲ್ಲಭಬಾಯ್ ಪಟೇಲ್‌ರು ಸಂಸ್ಥಾನಗಳನ್ನು ಹೇಗೆ ವಿಲೀನಗೊಳಿಸಿದರು?**

- ಸಂಸ್ಥಾನಗಳು ಭಾರತ ಒಕ್ಕೂಟ ಸೇರಲು ಆಹ್ವಾನ
- ರಾಜ್ಯಾದಾಯ ಆಧರಿಸಿ ರಾಜಧನ ನಿಗದಿ.

Downloaded from scoringtarget.com

• ಸವಲತ್ತು, ಸ್ಥಾನಮಾನ ನೀಡಲಾಯಿತು. • ಪಟೇಲರಿಂದ ವಿಲೀನಕಾರ್ಯ ಪೂರ್ಣ.

• ಹೈದ್ರಾಬಾದ, ಜುನಾಘಡ, ಜಮ್ಮು ಕಾಶ್ಮೀರ ಭಾರತ ಒಕ್ಕೂಟಕ್ಕೆ ಸೇರ್ಪಡೆ.

**೧೫. ಸ್ವಾತಂತ್ರ್ಯ ನಂತರ ಭಾಷಾವಾರು ರಾಜ್ಯಗಳ ರಚನೆ ಏಕೆ ಅನಿವಾರ್ಯವಾಗಿತ್ತು? ಪುಷ್ಠೀಕರಿಸಿ.**

• ಭಾಷೆಯನ್ನು ಆಧರಿಸಿ ಭೌಗೋಳಿಕ ಗಡಿ ಗುರುತಿಸಲು ಒತ್ತಾಯ. • ಉತ್ತಮ ಆಡಳಿತ ನಡೆಸಲು ಅವಶ್ಯಕ.

• ಸಂಸ್ಥಾನಗಳಲ್ಲಿ ಜನರಾಡುವ ಭಾಷೆಯಲ್ಲಿ ಆಡಳಿತವಿರಲಿಲ್ಲ. • ಭಾಷಾವಾರು ರಾಜ್ಯಗಳಿಗಾಗಿ ತೀವ್ರ ಹೋರಾಟ.

**೧೬. ಎರಡನೆಯ ಮಹಾಯುದ್ಧಕ್ಕೆ ಕಾರಣಗಳನ್ನು ತಿಳಿಸಿ.**

• ಮೊದಲ ಮಹಾಯುದ್ಧದ ಸೋಲು. • ಅವಮಾನಕರ ಒಪ್ಪಂದಗಳು. • ರಾಷ್ಟ್ರೀಯವಾದದ ಉಗ್ರತೆ. • ಉಗ್ರ ರಾಷ್ಟ್ರೀಯತೆ ಬೆಳವಣಿಗೆ.

• ಕೈಗಾರಿಕೋದ್ಯಮಿಗಳಿಂದ ಧನಸಹಾಯ. • ಸೇಡು ಮತ್ತು ದುರಾಭಿಮಾನ ಚಳುವಳಿ. • ಸರ್ವಾಧಿಕಾರಿಗಳ ಬೆಳವಣಿಗೆ.

• ಎರಡು ಶತ್ರುಬಣಗಳ ಉದಯ. • ರಾಷ್ಟ್ರ ಸಂಘದ ವಿಫಲತೆ. • ಪೋಲೆಂಡ್ ಮೇಲೆ ಜರ್ಮನಿ ದಾಳಿ.

**೧೭. ಕೋಮುವಾದ ಎಂದರೇನು?**

ಉತ್ತರ: ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲಿ ಗುರುತಿಸಿಕೊಂಡು ಪರಸ್ಪರ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವುದು.

**೧೮. ಕಳ್ಳ ಸಾಗಾಣಿಕೆ ಎಂದರೇನು?**

ಉತ್ತರ: ಯಾವುದೇ ಆಮದು ಸುಂಕವನ್ನು ಸರಕಾರಕ್ಕೆ ನೀಡದೆ ಗುಪ್ತವಾಗಿ ವಿದೇಶಗಳಿಂದ ವಸ್ತುಗಳನ್ನು ತರಿಸಿಕೊಳ್ಳುವುದು.

**೧೯. ಬಡತನ ನಿವಾರಣೆಗಾಗಿ ರೂಪಿಸಿರುವ ಯೋಜನೆಗಳಾವುವು?**

• ಬಿ.ಪಿ.ಎಲ್.ಕಾರ್ಡ ವಿತರಣೆ. • ಪಂಚವಾರ್ಷಿಕ ಯೋಜನೆ. • ತಲಾ ಆದಾಯ ಹೆಚ್ಚಳಕ್ಕೆ ಪ್ರಯತ್ನ.

• ಜವಾಹರ ರೋಜಗಾರ್ ಯೋಜನೆ. • ಗ್ರಾಮೀಣ ಉದ್ಯೋಗ ಖಾತರಿ ಯೋಜನೆ. • ಪ್ರಧಾನಮಂತ್ರಿ ಗ್ರಾಮೋದಯ ಯೋಜನೆ.

**೨೦. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವವು?**

• ಟಿಬೆಟ್ ವಿವಾದ. • ಭಾರತ – ಚೀನಾ ಯುದ್ಧ. (೧೯೬೨) • ಅರುಣಾಚಲ ಪ್ರದೇಶ ತನ್ನದೆಂದು ಪ್ರತಿಪಾದನೆ. • ನಕ್ಸಲವಾದ ಸಮಸ್ಯೆ.

• ಗಡಿ ಸಮಸ್ಯೆ. • ಅಣ್ವಸ್ತ್ರ ತಯಾರಿ. • ವಿದೇಶಿ ವ್ಯಾಪಾರದ ಸವಾಲುಗಳು. • ಗಡಿ ಅತಿಕ್ರಮಣ.

**೨೧. ಆರ್ಥಿಕವಾಗಿ ಹಿಂದುಳಿದ (ಬಡರಾಷ್ಟ್ರಗಳು) ರಾಷ್ಟ್ರಗಳ ಪ್ರಗತಿಗಾಗಿ ಭಾರತ ಕೈಗೊಂಡಿರುವ ಕ್ರಮಗಳಾವುವು?**

• ಷರತ್ತುಗಳಿಲ್ಲದೆ ಬಡರಾಷ್ಟ್ರಗಳಿಗೆ ಆರ್ಥಿಕ ನೆರವು. • ಹಿಂದುಳಿದ ರಾಷ್ಟ್ರಗಳ ಆತ್ಮಗೌರವ ಎತ್ತಿಹಿಡಿಯಿತು.

• ಆರ್ಥಿಕ ನ್ಯಾಯ ಸಮಾನತೆ ಪ್ರತಿಪಾದನೆ. • ಶ್ರೀಮಂತ ರಾಷ್ಟ್ರಗಳ ಬಂಡವಾಳ ಬಡರಾಷ್ಟ್ರಗಳಿಗೆ ಹರಿದು ಬರಲು ಪ್ರಯತ್ನ.

**೨೨. ಭಯೋತ್ಪಾದನೆ ನಿಯಂತ್ರಣಕ್ಕೆ ಭಾರತ ಹೇಗೆ ಯತ್ನಿಸುತ್ತಿದೆ?**

• ತನ್ನ, ಅನ್ಯರ ನೆಲದ ಭಯೋತ್ಪಾದನೆಗೆ ತೀವ್ರ ವಿರೋಧ. • ಕೇಂದ್ರ, ರಾಜ್ಯ ಸರ್ಕಾರಗಳಿಂದ ನಿಗ್ರಹಕ್ಕೆ ತೀವ್ರ ಪ್ರಯತ್ನ

• ವಿಶೇಷ ಪರಿಣತಿ ಪಡೆ ರಚನೆ. • ಉಗ್ರಗಾಮಿಗಳ ನಿಗ್ರಹಕ್ಕೆ ರಕ್ಷಣಾ ಪಡೆ ಬಳಕೆ. • ಭಾರತದಿಂದ ಶಾಂತಿಪ್ರಿಯ ನೀತಿ ಪ್ರತಿಪಾದನೆ.

**೨೩. ಸಾಮಾನ್ಯ ಸಭೆಯನ್ನು ಜಾಗತಿಕ ಸಂಸತ್ತು ಎಂದು ಕರೆಯುತ್ತಾರೆ. ಏಕೆ?**

ಉತ್ತರ: ವಿಶ್ವದ ಎಲ್ಲಾ ಪ್ರಮುಖ ವಿದ್ಯಮಾನಗಳ ಚರ್ಚೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.

**೨೪. ಭಾರತ ವಿಶ್ವಸಂಸ್ಥೆಯ ಯಾವ ಕಾರ್ಯಚಟುವಟಿಕೆಗಳಲ್ಲಿ ಪೂರ್ತಿ ಸಹಕರಿಸುತ್ತದೆ?**

ಉತ್ತರ: ವಿಶ್ವಶಾಂತಿ ಮತ್ತು ಮಾನವ ಹಕ್ಕುಗಳ ರಕ್ಷಣೆಯ ಬಗೆಗಿನ ಕಾರ್ಯಚಟುವಟಿಕೆಗಳಲ್ಲಿ ಸಹಕರಿಸುತ್ತದೆ.

**೨೫. ವಿಶ್ವಸಂಸ್ಥೆಯ ಧ್ಯೇಯೋದ್ದೇಶಗಳಾವುವು?**

• ಅಂತರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆ ಸ್ಥಾಪನೆ. • ರಾಷ್ಟ್ರಗಳ ಮಧ್ಯೆ ಮೈತ್ರಿ ಬೆಳೆಸುವುದು. • ಮೂಲಭೂತ ಹಕ್ಕುಗಳ ಬಗ್ಗೆ ನಂಬಿಕೆ ಹೆಚ್ಚಿಸುವುದು.

• ಜಾಗತಿಕ ಸಮಸ್ಯೆಗಳಿಗೆ ಸಹಕಾರಯುತ ಪರಿಹಾರ. • ನ್ಯಾಯ & ಒಡಂಬಡಿಕೆ ಷರತ್ತುಗಳಿಗೆ ಮನ್ನಣೆ. • ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆ ಕೇಂದ್ರವಾಗಿ ಕಾರ್ಯನಿರ್ವಹಣೆ.

**೨೬. ನಿರುದ್ಯೋಗ ಎಂದರೇನು?**

ಉತ್ತರ: ದುಡಿಯುವ ವಯಸ್ಸು, ಸಾಮಾರ್ಥ್ಯ, ಆಸಕ್ತಿ, ಅರ್ಹತೆ ಇದ್ದರೂ ಉದ್ಯೋಗ ಸಿಗದ ಪರಿಸ್ಥಿತಿಯಾಗಿದೆ.

**೨೭. ಅಸಂಘಟಿತ ಕೆಲಸಗಾರರ ಸಮಸ್ಯೆಗಳನ್ನು ವಿವರಿಸಿರಿ.**

• ನಿಗದಿತ ನಿಯಮ, ಕಾಯ್ದೆಗಳು ಇಲ್ಲ. • ಕಡಿಮೆ ಕೂಲಿ. • ವೈದ್ಯಕೀಯ ಸೌಲಭ್ಯಗಳಿಲ್ಲ.

• ಕೆಲಸದ ಅಭದ್ರತೆ. • ನಿಗದಿತ, ವಿರಾಮ ಹಾಗೂ ನಿವೃತ್ತಿ ವೇತನಗಳಿಲ್ಲ. • ಉದ್ಯೋಗಪತಿಗಳಿಂದ ಶೋಷಣೆಗೆ ಬಲಿ.

**೨೮. ಸ್ವ–ಸಹಾಯ ಸಮೂಹ ಎಂದರೇನು?**

ಉತ್ತರ: ಮಹಿಳೆಯರ ಸ್ವಪ್ರಜ್ಞೆ, ಸ್ವಪ್ರೇರಣೆ ಹಾಗೂ ಪರಸ್ಪರ ನಂಬಿಕೆಯೊಂದಿಗೆ ತಮ್ಮ ಆರ್ಥಿಕ ಸಾಮಾಜಿಕ ಅಗತ್ಯಗಳನ್ನು ತಾವೇ ತಮ್ಮ ಸ್ವಂತ ಪ್ರಯತ್ನ, ಸಹಕಾರದಿಂದ ಪೂರೈಸಿಕೊಳ್ಳುವ ಉದ್ದೇಶದಿಂದ ರೂಪಿತವಾದ ಒಂದು ಸ್ಥಳೀಯ ಸಮೂಹ.

**೨೯. ಕೈಗಾ ಅಣುಸ್ಥಾವರ ವಿರೋಧಿ ಚಳುವಳಿ ವಿವರಿಸಿರಿ.**

• ಕೈಗಾ ಅಣು ಸ್ಥಾವರ ಸ್ಥಾಪನೆಯ ವಿರೋಧಿ ಚಳುವಳಿ. • ಶಿವರಾಮ ಕಾರಂತರ ನಾಯಕತ್ವ. • ಅರಣ್ಯ ನಾಶ. • ಅಣು ವಿಕಿರಣದಿಂದ ಪರಿಸರ ಮಾಲಿನ್ಯ.

• ಜೀವ ಪ್ರಭೇಧ ಹಾನಿ ವಿರುದ್ಧ ಹೋರಾಟ.

Downloaded from scoringtarget.com